**ಓಂ ಶಾಂತಿ, ಬಾಪ್ ದಾದಾ. ಅವ್ಯಕ್ತ ಮುರಳಿ 15-02-1969.**

(ओम शान्ति,  बापदादा. अव्यक्त मुरली 15-02-1969)

***ಶಿವರಾತ್ರಿಯ ದಿನದಂದು ಅವ್ಯಕ್ತ ಬಾಪದಾದಾರವರ ಮಹಾವಾಕ್ಯಗಳು.***

(ಸಂತರಿ ದಾದಿಯವರ ತನುವಿನ ಮುಖಾಂತರ)

(शिवरात्रि के अवसर पर अव्यक्त बापदादा के महावाक्य)

ಇಂದು ಯಾರ ಸ್ವಾಗತದ ದಿನವಾಗಿದೆ? (ತಂದೆ ಮತ್ತು ಮಕ್ಕಳ) ಅನೇಕ ಮಕ್ಕಳು ತಮ್ಮನ್ನು ಮರೆತಿರುವರು, ತಂದೆಯನ್ನೂ ಮರೆಸಿರುವರು. ಮೊದಲಿನಂತೆ ಈ ದಿನವೂ ಸ್ವಾಗತದ ದಿನವಲ್ಲವೇ? ಎಷ್ಟೊಂದು ಟೆಲಿಗ್ರಾಂ(ಉತ್ತರ)ಗಳು ಬರುತ್ತಿದ್ದವು ಹಾಗಾದರೆ ಮರೆತಿರುವಿರೇ? ಯಾವಾಗ ತಂದೆಯಿದ್ದಾರೋ ಅವರನ್ನು ಎಲ್ಲಿಯವೆರೆಗೆ ಮರೆಯುವಿರಿ. ಇದಾಗಿದೆ ನಿಶ್ಚಯ, ಇದಾಗಿದೆ ಶಿಕ್ಷಣ. ಯಾವಾಗ ಶಿಕ್ಷಣ ಸದಾ ಇದೆಯೋ ಆಗ ಕಾರ್ಯವೂ ಅದೇ ರೀತಿ ನಡೆಯುತ್ತಿರುವುದು. ಆ ನಿಶ್ಚಯವಿಲ್ಲದಿದ್ದರೆ ಕಾರ್ಯದಲ್ಲಿಯೂ ಸ್ವಲ್ಪ.... ಮಕ್ಕಳು ತಮ್ಮ ಸ್ಥಿತಿಯನ್ನು ಹೀಗೂ ತಿಳಿಯುತ್ತಾರೆ *ನಾನು ಯಾರ ಮಗು? ತಂದೆ ಸದಾ ಇರುವಾಗ ಮಕ್ಕಳು ಕೂಡಾ ಸದಾ ಇರುತ್ತಾರೆ. ಆದರೆ ದೇಹಾಭಿಮಾನ ಸ್ವಧರ್ಮವನ್ನು ಮರೆಸುತ್ತದೆ.* ಮರೆಯುವುದರಿಂದ ಕಾರ್ಯ ಹೇಗಾಗುವುದು? ಹೇಗೆ ಮುಂದೆಬರುವಿರಿ? ಯಾವಾಗ ತಂದೆ ತಮ್ಮ ಪರಿಚಯವನ್ನು ಕೊಟ್ಟರೋ, ಆಗ ಮಕ್ಕಳಿಗೂ ತಮ್ಮ ಪರಿಚಯ ಸಿಕ್ಕಿತು, ಇದೇ ಲಕ್ಷ್ಯವನ್ನು ಪಕ್ಕಾ ಮಾಡಲು ಎಷ್ಟು ಸಮಯದಿಂದ ಪರಿಶ್ರಮ ಮಾಡಲಾಗಿದೆ, ಆ ಪರಿಶ್ರಮದ ಫಲ ಎಲ್ಲಿಯ ವರಗೆ ಬಂದಿದೆ? ಕೇವಲ ನೆನಪು ಮಾಡಿಸಲು ಇದನ್ನು ಹೇಳುತ್ತಿರುವೆವು. ಮುರಳಿಯನ್ನಂತೂ ನುಡಿಸುವುದಿಲ್ಲ. "ಮಕ್ಕಳು ಬಹಳ ನೆನಪು ಮಾಡುತ್ತಿದ್ದಾರೆ, ತಾವು ಬಂದರೆ ಮಕ್ಕಳು ಪುನಶ್ಚೇತನಗೊಳ್ಳುವರೆಂದು ಮಗು ಹೇಳಿದ್ದರಿಂದ ಕೇವಲ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿರುವೆವು, ಆದರೆ ನಿಶ್ಚಯವಿದ್ದರೆ ಚೇತನದಿಂದಲೇ ಇರುವಿರಿ. ಆದರೂ ಸ್ವಲ್ಪ ಸಮಯಕ್ಕಾಗಿ ಮಕ್ಕಳನ್ನು ಮಿಲನ ಮಾಡಲು ಬರಬೇಕಾಯಿತು. ಸ್ವಮಾನದ ಸ್ಮೃತಿಯನ್ನು ಕೊಡಲು ಬಂದಿದ್ದೇನೆ. ಮಕ್ಕಳು ಸದಾ ತಮ್ಮನ್ನು ಸೌಭಾಗ್ಯಶಾಲಿಯೆಂದು ತಿಳಿಯಿರಿ. ಯಾರಿಗೆ ತಂದೆ, ಸದ್ಗುರು, ಶಿಕ್ಷಕನೊಂದಿಗೆ ಪೂರ್ಣ ಸಂಬಂಧ, ಬಾಂಧವ್ಯ ಇದೆಯೋ ಅವರನ್ನೇ ಸದಾ ಸೌಭಾಗ್ಯಶಾಲಿಯೆಂದು ಕರೆಯಲಾಗುತ್ತದೆ.

ಕನ್ಯೆಯ ನಿಶ್ಚಿತಾರ್ಥವಾದಾಗ ಏನಾಗುತ್ತದೆ? ಕೇವಲ ಪತಿಯೊಂದಿಗೆ ಅವಳ ಪೂರ್ಣ ಬಾಂಧವ್ಯವಿರುತ್ತದೆ. ಆಗ ಅವಳನ್ನು ಮುತ್ತೈದೆ ಎನ್ನುತ್ತಾರೆ. ಆದರೆ ಅದು ಎಲ್ಲಿಯವರೆಗೆ? ಒಳಗಡೆ ಏನಿದೆ. ಕನ್ಯೆ 100 ಬ್ರಾಹ್ಮಣರಿಗಿಂತ ಉತ್ತಮ ಎಂದು ಪರಿಗಣಿಸಲಾಗುತ್ತದೆ. ನಿಶ್ಚಿತಾರ್ಥದ ನಂತರ ಅಶುದ್ಧರಾದರೆ ಒಳಗಿನಿಂದ ದೌರ್ಭಾಗ್ಯಶಾಲಿ. ಇದು ಯಾರಿಗೂ ಗೊತ್ತಿಲ್ಲ. ಸದಾಕಾಲಕ್ಕೂ ಸರ್ವ ಸಂಬಂಧ ಪರಮಾತ್ಮನೊಂದಿಗೆ ಇರಬೇಕು, ಆ ಕನ್ಯೆಯನ್ನೆ(ಆತ್ಮ) ಸದಾ ಮುತ್ತೈದೆ ಎಂದು ತಂದೆ ಹೇಳುತ್ತಾರೆ.

ಇದೀಗ ಅಧ್ಯಯನದ ಸಮಯವಾಗಿದೆ, ತಂದೆ ತಮ್ಮ ಕರ್ತವ್ಯವನ್ನು ಮಾಡುತ್ತಿದ್ದಾರೆ, ಸೂಚನೆಗಳನ್ನು ಕೊಡುತ್ತಿದ್ದಾರೆ. ಎಲ್ಲಿಯವರೆಗೆ ಓದಿಸಬೇಕೋ ಅಲ್ಲಿಯವರೆಗೆ ಓದಿಸುತ್ತಲೇ ಇರುತ್ತಾರೆ. ವಿನಾಶ ಸಮ್ಮುಖದಲ್ಲಿದೆ, ಅದರ ಸಂಬಂಧ ತಂದೆಯ ಜೊತೆಗಿದೆ. ತಂದೆಯು ನಿಮ್ಮನ್ನು ಬಿಟ್ಟು(ಅಗಲಿ) ಹೋಗಿದ್ದಾರೆ ಎಂದು ಭಾವಿಸಬೇಡಿ. ಅಗಲಿಕೆಯೂ ಅಲ್ಲ, ವಿದಾಯವೂ ಅಲ್ಲ. ಎಲ್ಲಿಯವರೆಗೆ ವಿನಾಶವಾಗುವುದಿಲ್ಲವೋ ಅಲ್ಲಿಯವರೆಗೆ ತಂದೆ ಜೊತೆಗಿದ್ದಾರೆ. ಕೆಲವು ಕಾರ್ಯಗಳಿಗಾಗಿ ವತನಕ್ಕೆ ತಂದೆ ಹೋಗಿರುವರು. ಸಮಯಾನುಸಾರ ಅದೆಲ್ಲವೂ ಆಗುತ್ತಿರುವುದು. ಇಲ್ಲಿ ಅಗಲುವಿಕೆಯೂ ಇಲ್ಲ, ವಿದಾಯವೂ ಇಲ್ಲ. ಅಗಲುವಿಕೆ ಅನಿಸುತ್ತದೆಯೇ? ನೀವು ವಿದಾಯವನ್ನು ಕೊಟ್ಟಿದ್ದೀರಾ? ಒಂದು ವೇಳೆ ನೀವು ವಿದಾಯ(ಬೀಳ್ಕೊಡುಗೆ)ವನ್ನು ಕೊಟ್ಟಿದ್ದೇ ಆದರೆ ಅಗಲುವಿಕೆ ಇರುತ್ತಿತ್ತು. ಕೊಟ್ಟಿಲ್ಲವಾದರೆ ಅಗಲುವಿಕೆಯೂ ಇರುವುದಿಲ್ಲ. ಇದು ನಾಟಕದಲ್ಲಿ ಪಾತ್ರ ನಡೆಯುತ್ತಿರುವುದು. ತಂದೆಯ ಆಟ

ನಡೆದಿದೆ. ಆಟದಲ್ಲಿ ಆಟ ನಡೆದಿದೆ. ಮುಂದೆ ಇನ್ನೂ ಅನೇಕ ಆಟಗಳನ್ನು ನೋಡಲಿಕ್ಕಿದೆ. ಅಷ್ಟು ಸಾಹಸವಿದೆಯೇ? ಸಾಹಸವಿದ್ದಾಗ ಬಹಳಷ್ಟನ್ನು ನೋಡುವಿರಿ. ಆದ್ದರಿಂದ ಹೆಜ್ಜೆ-ಹೆಜ್ಜೆಯನ್ನೂ ಎಚ್ಚರಿಕೆಯಿಂದ ಇಡಬೇಕು. ಒಂದು ವೇಳೆ ಎಚ್ಚರಿಕೆಯಿಂದ ಇಡದಿದ್ದರೆ ಕೆಲವೆಡೆ ತಗ್ಗು-ದಿಣ್ಣೆಗಳ ಬರಬಹುದು. ಅಪಘಾತಗಳೂ ಆಗಬಹುದು. ಮಕ್ಕಳನ್ನು ಮಿಲನ ಮಾಡಲು ಸ್ವಲ್ಪ ಸಮಯಕ್ಕಾಗಿ ಬಂದಿರುವೆನು. ವತನದಿಂದ ಮಾಡಬೇಕಾದ ಕೆಲಸಗಳು ಇನ್ನೂ ಬಹಳಷ್ಟಿವೆ . ಮಕ್ಕಳ ಆಸೆಗಳನ್ನು ಮತ್ತು ಭಕ್ತರ ಮನೋಕಾಮನೆಗಳನ್ನು ಪೂರ್ಣ ಮಾಡಬೇಕಾಗುತ್ತದೆ. ಎಲ್ಲಾ ಕಾರ್ಯಗಳು ಸಂಗಮಯುಗದಲ್ಲಿಯೇ ಆಗುತ್ತವೆ. ತಂದೆಯ ಪರಿಚಯ ಅರ್ಥಾತ್, ಖಜಾನೆ, ಲಾಟರಿ ದೊರೆಯಿತು. ಈಗ ಮಕ್ಕಳ ಸೇವೆ ಪೂರ್ಣವಾಯಿತು. ವತನದಿಂದ ಈಗ ಎಲ್ಲರ ಸೇವೆ ಮಾಡಬೇಕು. ನಮ್ಮ ಸ್ವಂತ ಮಕ್ಕಳೂ ಇದ್ದಾರೆ ಮಲತಾಯಿಯ ಮಕ್ಕಳೂ ಇದ್ದಾರೆ. ಆದರೆ ಸೇವೆಯಂತೂ ಎಲ್ಲರಿಗೂ ಮಾಡಬೇಕಾಗಿದೆ. ಬೆಳಿಗ್ಗೆ ಬಂದು ದೃಷ್ಟಿಯಿಂದ ಪರಿಚಯ ಕೊಟ್ಟಾಯಿತು. ದೃಷ್ಟಿಯಿಂದ ಸಕಾಶವನ್ನು ಕೊಟ್ಟು ಎಲ್ಲರಿಗೂ ಸುಖವನ್ನು ಕೊಡುವುದು ತಂದೆಯ ಕರ್ತವ್ಯವಾಗಿದೆ. ಈಗಂತೂ ಎಲ್ಲರಿಗೂ ಸಂಗ್ರಹಾಲಯದ ಸೇವೆ ಮಾಡಬೇಕಾಗಿದೆ. ಎಲ್ಲರಿಗೂ ತಂದೆಯ ಪರಿಚಯವನ್ನು ಕೊಡಬೇಕು. ಯಾವ ಚಿತ್ರಗಳನ್ನೆಲ್ಲಾ ತಂದೆ ಸೇವೆಗಾಗಿ ಮಾಡಿರುವರೋ ಅದನ್ನು ಉಪಯೋಗಿಸಿ ಸೇವೆ ಮಾಡಬೇಕು. ಕೈ ಬೆರಳನ್ನು ಕೊಡುವುದರಿಂದ ಪರ್ವತವನ್ನು ಎತ್ತಬಹುದು. ಕೈ ಬೆರಳಿನಿಂದ ಪರ್ವತವನ್ನು ಎತ್ತಿದ ಗೋಪ ಗೋಪಿಯರ ಇದೇ ಗಾಯನವಿದೆ. ಕೈ ಬೆರಳಿನ ಸಹಯೋಗವಿಲ್ಲದಿದ್ದರೆ ಬೆಟ್ಟ( ಪರ್ವತ) ಏಳುವುದಿಲ್ಲ. ಸೃಷ್ಟಿಯಲ್ಲಿ ಆತ್ಮರ ಉದ್ಧಾರ ಮಾಡಿ ಆ ಪರ್ವತವನ್ನು ಎತ್ತಿ ನಂತರ ಜೊತೆಗೆ ಕರೆದುಕೊಂಡು ಹೋಗಬೇಕಾಗಿದೆ. ಸಮೂಹವಿರುತ್ತದೆ ಅಲ್ಲವೇ? ಅಂತ್ಯದಲ್ಲಿ ಸಮೂಹಿಕವಾಗಿ ಎಲ್ಲರೊಂದಿಗೆ ಇರಬೇಕು. ಮೊದಲು ಸಾಕ್ಷಾತ್ಕಾರದಲ್ಲಿ ಕೆಂಪು ಸಮೂಹಗಳನ್ನು ನೋಡಿದ್ದೀರಿ, ಆಗ ಅದು ತಿಳಿದಿರಲಿಲ್ಲ ಆದರೆ ಈಗ ಆತ್ಮಗಳ ಸಮೂಹವನ್ನೇ ಜೊತೆಗೆ ಕರೆದುಕೊಂಡು ಹೋಗುವ ಕಾರ್ಯಕ್ರಮ ನಾಟಕದಲ್ಲಿ ನಿಗದಿಯಾಗಿದೆ. ಎಲ್ಲರ ಸೇವೆ ಮಾಡಬೇಕು ಒಳ್ಳೆಯದು.

ಬೆಳಿಗ್ಗೆ ತಂದೆಯ ನೆನಪಿನಲ್ಲಿರಿ ಏಕೆಂದರೆ ಆ ಸಮಯ ತಂದೆ ಎಲ್ಲರನ್ನೂ ನೆನಪು ಮಾಡುತ್ತಾರೆ. ಆ ಸಮಯದಲ್ಲಿ ಕೆಲವು ಮಕ್ಕಳು ಕಂಡು ಬರುವುದಿಲ್ಲ. ಹುಡುಕಬೇಕಾಗುತ್ತದೆ. ಭಲೇ ಒಬ್ಬರೇ ಕುಳಿತು ನೆನಪು ಮಾಡುತ್ತೀರಿ, ಆದರೆ ಸಂಘಟನೆಯ ಜೊತೆಗೂ ಇರಬೇಕು. ಎಷ್ಟು ನೆನಪಿನಲ್ಲಿರುವಿರೋ ಅಷ್ಟೇ ತಂದೆಯ ಸಮೀಪಕ್ಕೆ ಬರುವಿರಿ. ತಂದೆಯನ್ನು ಮರೆಯುವುದರಿಂದಲೇ ಗೊಂದಲದಲ್ಲಿ ಬರುವಿರಿ. ತಂದೆಯನ್ನು ಸದಾ ಜೊತೆಗೆ ಇಟ್ಟುಕೊಳ್ಳುವುದರಿಂದ ಮರೆಯುವುದಿಲ್ಲ.

***ಆತ್ಮಿಕ ಸ್ಥಿತಿ/ಯೋಗ ಸ್ಥಿತಿ***

ನಾನಾತ್ಮ ಆನಂದ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

**ಯಾ**ವಾಗ ನಮ್ಮಲ್ಲಿ ನಿಶ್ಚಯವಿರುತ್ತದೆಯೋ ಆಗ ಯಾವ ಕಾರ್ಯವಾದರೂ ಹೇಗೆ ನಡೆಯುತ್ತಿತ್ತೋ ಹಾಗೆ ನಡೆಯುತ್ತಲೇ ಇರುತ್ತದೆ. ಮತ್ತು ದೆಹಬಿಮಾನ ಸ್ವಧರ್ಮವನ್ನು ಮರೆಸಿಬಿಡುತ್ತದೆ. ಮರೆತು ಹೋಗುವುದರಿಂದ ಕಾರ್ಯ ಮುನ್ನಡೆಯುವುದಿಲ್ಲ. ಎಂದು ಹೇಳುತ್ತಾ... ಬಾಪ್ ದಾದ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

1. ನಾನು ಸದಾ ಕಾರ್ಯವನ್ನು ಮುನ್ನಡೆಸುವ ನಿಶ್ಚಯ ಬುದ್ಧಿ ಸ್ವರೂಪ.

2. ನಾನು ಸದಾ ಸ್ವಧರ್ಮದಲ್ಲಿ ಇರುವ ಆತ್ಮಭಿಮಾನಿ.

3.ನಾನು ಸದಾ ನಿಶ್ಚಯ ಬುದ್ಧಿಯಿಂದ ಚೇತನತೆಯಿಂದ (ಸಂತೋಷವಾಗಿ) ಇದ್ದೇನೆ.

4. ನಾನು ಹೆಜ್ಜೆ-ಹೆಜ್ಜೆಯನ್ನು ಸಂಭಾಳಿಸಿ ಇಡುತ್ತಾ, ಡ್ರಾಮದಲ್ಲಿರುವ ದೃಶ್ಯಗಳನ್ನು ಸಾಹಸದಿಂದ ನೋಡಬಲ್ಲ ಧೈರ್ಯ ಸ್ವರೂಪ.

5. ನಾನು ತಂದೆ, ಶಿಕ್ಷಕ ಮತ್ತು ಸದ್ಗುರುವಿನೊಂದಿಗೆ ಪೂರ್ಣ ಸಂಬಂಧ ಮತ್ತು ಪೂರ್ಣ ಜೊತೆ ಇರುವ ಸದಾ ಸೌಭಾಗ್ಯಶಾಲಿ.

6. ನಾನು ಸದಾ ಕಾಲಕ್ಕೂ ಪರಮಾತ್ಮನೊಂದಿಗೆ ಸರ್ವ ಸಂಬಂಧಗಳನ್ನು ಜೋಡಿಸಿರುವ ಮುತ್ತೈದೆಯಾಗಿದ್ದೇನೆ.

7. ನಾನು ಎಲ್ಲರಿಗೂ ತಂದೆಯ ಪರಿಚಯವನ್ನು ಕೊಟ್ಟು ಆತ್ಮರ ಕಲ್ಯಾಣ(ಉದ್ಧಾರ) ಮಾಡಿ ಈ ಕಲಿಯುಗೀ ಪರ್ವತವನ್ನು ಎತ್ತಲು ಸಹಯೋಗವನ್ನು ಕೊಡುವ ಸಹಯೋಗಿ.

***ಹೆಚ್ಚಿನ ಉಲ್ಲೇಖಕ್ಕಾಗಿ.***

1. ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ (01-02-1979, 23-12-1987, 10-01-1988, 07-04-1981).

2. ನಿಶ್ಚಯ : ಅವ್ಯಕ್ತ ಮುರಳಿ (21-01-1969).